ಪ್ರಾಮುಖ್ಯತೆಯನ್ನು ತಾವು ಅರಿತಿರುವುದರಿಂದ ಇದನ್ನು ಆದಷ್ಟು ಬೇಗ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಆತಂಕವನ್ನು ವ್ಯಕ್ತಪಡಿಸಿದ್ದಾರೆ ಅದರಲ್ಲಿ ನಾನು ಭಾಗಿಯಾಗಿದ್ದೇನೆ. ಆದರೆ ಅದರ ಬೆಲೆಯ ಅರ್ಧ ಭಾಗವನ್ನು ಮುನಿಸಿಪಾಲಿಟಿಯವರು ಕೊಡಲೇ ಬೇಕೆಂಬ ನಿಯಮವನ್ನು ಹಾಕಿಕೊಂಡಿದ್ದೇವೆ. ಅವರು ಅಷ್ಟು ಹಣವನ್ನು ಕೊಡದಿದ್ದರೆ ಅಲ್ಲಿ ರಸ್ತೆಯನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ. ಆದರೆ ಇವತ್ತು ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯ್‌ನಿಂದ ಬರುತ್ತಿದ್ದ ಆದಾಯವನ್ನು ಹಿಂದಿನ ಸರ್ಕಾರದವರು ರದ್ದು ಮಾಡಿರುವುದರಿಂದ ನಾವು ಎಲ್ಲೇ ಹೋದರೂ ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಸಹ ಹಣದ ಹಾಹಾಕಾರ ಇರುವುದನ್ನು ಕಾಣುತ್ತಿದ್ದೇವೆ. ಇದು ಹಿಂದಿನ ಸರ್ಕಾರದ ನೀತಿ ಪ್ರಕಾರ ಆ ರೀತಿ ಹೋಗಿಬಿಟ್ಟಿದೆ, ದುಡ್ಡಿಲ್ಲದೇ ಬಹಳ ತೊಂದರೆಪಡುತ್ತಿದ್ದಾರೆ, ಮತ್ತು ಆಲ್ಲಿಯ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನದಲ್ಲೂ ಇದೆ. ಆದರೆ ತಿಪಟೂರು ಮುನಿಸಿಪಾಲಿಟಿಗೆ ಒಳ್ಳೆಯ ಉತ್ಪತ್ತಿ ಬರುತ್ತದೆ ಅದು ಒಂದು ಒಳ್ಳೆಯ ವ್ಯಾಪಾರ ಕೇಂದ್ರ, ತೆಂಗು, ಕೊಬ್ರಿ ವ್ಯಾಪಾರ ಕೇಂದ್ರ ವಾಗಿರುವುದರಿಂದ ಆ ಊರಿನ ಪುರಸಭೆಯವರು ತಮ್ಮ ಕಂತನ್ನು ಕೊಟ್ಟುಬಿಟ್ಟರೆ ಸರ್ಕಾರ ಆ ಕೆಲಸವನ್ನು ಬೇಗ ಪೂರೈಸುವುದರಲ್ಲಿ ಯಾವ ತೊಂದರೆಯೂ ಇರುವುದಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿದ ಹಾಗೆ ಅಲ್ಲಿ ಏನೋ ಸಂಪತ್ತು ಇದೆ, ಆದರೆ ಅಲ್ಲಿಯ ಮುನಿಸಿಪಾಲಿಟಿಯವರಿಗೆ ಸಂಬಳ ಕೊಡುವುದಕ್ಕೇ ಹಣವಿಲ್ಲ. ಆದುದರಿಂದ ಈ ರಸ್ತೆ ಅತಿ ಪ್ರಾಮುಖ್ಯವಾಗಿರುವುದರಿಂದ ಇನ್ನು ೨-೩ ವರ್ಷಗಳಲ್ಲಾದರೂ ಹಂತಹಂತವಾಗಿ ಮಾಡಿ ಪೂರೈಸುವುದಕ್ಕೆ ಏನಾದರೂ ವಾಗ್ದಾನವನ್ನು ಸರ್ಕಾರ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಆರ್. ಗುಂಡೂರಾವ್.—ಆ ರಸ್ತೆಯಲ್ಲಿ ನಾನು ಸಹ ಹೋಗಿದ್ದೇನೆ, ನಿಜವಾಗಿಯೂ ಅಲ್ಲಿ ರಸ್ತೆಯಾಗಬೇಕಾದ್ದು ಇದೆ ಆದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಎಷ್ಟು ಬೇಗ ಅಂದರೆ ಹಂತಹಂತವಾಗಿಯಾದರೂ ಅಲ್ಲಿ ರಸ್ತೆಯನ್ನು ಮಾಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

Unemployment in the State.

239. SRI P. RAMDEV (Malleswaram).—Will the Minister for Small Scale Industries, Labour, Food and Civil Supplies and Wakf be pleased to state.—

(*a*) the measures taken by the Government to solve unemployment (of literates and illiterates) in the State;

(*b*) the number of the educated and uneducated unemployed persons;

(*c*) the number of educated and uneducated unemployed persons in Bangalore ?

SRI C. M. IBRAHIM (Minister for Small Scall Industries, Labour Food and Civil Supplies and Wakf).—

(*a*) All developmental schemes of the Government are employment oriented. There are no schemes to provide employment as such.

(*b*) The number of candidates who have registered their names in the employment exchange offices.

(i) The number of Educated unemployed ; 3, 15,230

(ii) The number of uneducated unemployed 72,483

(*c*) The number of persons who have registered their names in Bangalore employment exchange office:

(i) The number of educated unemployed 97,526.

(ii) The number of uneducated unemployed 14,817.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ, ತಾವು ಉತ್ತರದಲ್ಲಿ ರಾಜ್ಯದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಬೃಹತ್ ರೀತಿಯಲ್ಲಿ ಯೋಜನೆಯನ್ನು ರೂಪಿಸಲಾಗಿದೆಯೆಂದು ಹೇಳಿದ್ದೀರಿ, ಆದರೆ ಸ್ವಲ್ಪ ವಿವರಣೆಯನ್ನು ಕೊಡುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಎಂಪ್ಲಾಯ್‌ಮೆಂಟ್ ಆಫರ್ಮೇಷನ್ ಸ್ಕೀಂ ಮತ್ತು ಸ್ಪೆಫೆಂಡರಿ ಸ್ಕೀಂ ಅಂತ ಎರಡು ಯೋಜನೆಗಳನ್ನು ಹಾಕಿಕೊಂಡು ೨.೪ ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡತಕ್ಕ ಬೃಹತ್ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

ಶ್ರೀ ಪಿ. ರಾಮ್‌ದೇವ್. ೧೯೭೯-೮೦ನೇ ಸಾಲಿನಲ್ಲಿ ೧೦.೨೦ ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡತಕ್ಕಂಥ ಯೋಜನೆಯನ್ನು ಹಾಕಿಕೊಂಡಿದ್ದೇವೆಂದು ಹೇಳಿದ್ದೀರಿ, ೧೯೭೯-೮೦ನೇ ಸಾಲು ಮುಗಿದು ಹೋಯಿತು, ಆದುದರಿಂದ ಇಲ್ಲಿಯವರೆಗೆ ಎಷ್ಟು ಜನಕ್ಕೆ ಉದ್ಯೋಗಾವಕಾಶವನ್ನು ಒದಗಿಸಿಕೊಟ್ಟಿದ್ದೀರಿ ಎನ್ನುವ ಬಗ್ಗೆ ಅಂಕಿಅಂಶವನ್ನು ಒದಗಿಸಿಕೊಡುತ್ತೀರಾ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಅಷ್ಟು ನಿರೀಕ್ಷಿಸಲಾಗುತ್ತಿದೆ. ಅಷ್ಟು ಜನರಿಗೂ ಉದ್ಯೋಗವನ್ನು ಒದಗಿಸಿಕೊಡಬೇಕು ಎನ್ನುವ ಬಗ್ಗೆ ಸಂಕಲ್ಪ ಇದೆ. ಆದಕ್ಕಾಗಿ ಎಂಪ್ಲಾಯ್‌ಮೆಂಟ್ ಆಫರ್ಮೇಷನ್ ಸ್ಕೀಂ ಅಂತ ಹೇಳಿ ಬಡ್ಜೆಟ್‌ನಲ್ಲಿ ಹೇಳಿದ್ದೇವೆ ಮತ್ತು ಅದಕ್ಕಾಗಿ ಬಡ್ಜೆಟ್‌ನಲ್ಲಿ ಹಿಂದಿನ ಸರ್ಕಾರದವರು ೩ ಕೋಟಿ ರೂ. ಗಳನ್ನು ಇಟ್ಟಿದ್ದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೮.೬ ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ, ನಮ್ಮ ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕಛೇರಿಯಲ್ಲಿ ಎಷ್ಟು ಜನ ನೊಂದಾಯಿಸಿದ್ದಾರೆ ಎನ್ನುವ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಇಷ್ಟು ವ್ಯಾಪಕವಾಗಿ ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ ಎನ್ನುವುದು ಸರ್ಕಾರದವರ ಗಮನಕ್ಕೂ ಬಂದಿರುವುದರಿಂದ ಅದನ್ನು ಪರಿಹರಿಸಲು ಸರ್ಕಾರದವರ ಮುಂದೆ ಏನಾದರೂ ಬೃಹತ್ ಯೋಜನೆ ಇದೆಯೇ ?

ಶ್ರೀ ಸಿ. ಎಂ. ಇಬ್ರಾಹಿಂ — ಎರಡು ಬೃಹತ್ ಯೋಜನೆಗಳು ಇದೆಯಲ್ಲಾ, ೧೦ ಲಕ್ಷದವರೆಗೆ ಉದ್ಯೋಗಾವಕಾಶವನ್ನು ಒದಗಿಸಿ ಕೊಡಬೇಕು ಅಂತ ನಿರೀಕ್ಷಣೆ ಇಟ್ಟುಕೊಂಡು ಇಂಥಾ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಇದಕ್ಕಿಂತಲೂ ಹೆಚ್ಚಿನ ಉತ್ತಮವಾದ ಬೃಹತ್ ಕಾರ್ಯಕ್ರಮವಿದ್ದರೆ ಮಾನ್ಯ ಸದಸ್ಯರು ಹೇಳಿದರೆ ಬೇಕಾದರೆ ಮುಂದೆ ಯೋಜನೆ ಮಾಡುವಾಗ ಜ್ಞಾಪಕದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಪಿ. ರಾಮ್‌ದೇವ್.—ಇಷ್ಟು ಬೃಹದಾಕಾರವಾಗಿರುವ ನಿರುದ್ಯೋಗ ಸಮಸ್ಯೆಯನ್ನು ಎಷ್ಟು ವರ್ಷಗಳಲ್ಲಿ ನಿವಾರಿಸುತ್ತೀರಿ ಎನ್ನುವ ಬಗ್ಗೆ ಒಂದು ಅಂದಾಜು ಇದೆಯೇ ?

ಶ್ರೀ ಸಿ. ಎಂ. ಇಬ್ರಾಹಿಂ.—ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಪಿ. ರಾಮ್‌ದೇವ್.—ಅಧ್ಯಕ್ಷರೇ, ಇತ್ತೀಚೆಗೆ ಕೇರಳದಲ್ಲಿ ಪ್ರತಿಯೊಬ್ಬ ನಿರುದ್ಯೋಗಿಗೂ ೬೦ ರೂ.ಗಳ ನಿರುದ್ಯೋಗ ಭತ್ಯವನ್ನು ಕೊಡುವುದಕ್ಕೆ ಒಂದು ಯೋಜನೆಯನ್ನು ಜಾರಿಗೆ ತಂದಿದ್ದಾರೆ. ನಮ್ಮ ಸರ್ಕಾರದವರು ಸಹ ಅಂಥಾ ಯೋಜನೆಯನ್ನು ತರುವುದಕ್ಕೆ ಯಾವುದಾದರೂ ಯೋಜನೆ ಇದೆಯೇ ?

ಶ್ರೀ ಸಿ. ಎಂ. ಇಬ್ರಾಹಿಂ.—ಈಗಾಗಲೇ ಸ್ಪೈಪ್ಹೆಂಡರಿ ಸ್ಕೀಂನ್ನು ತೆಗೆದುಕೊಂಡಿದ್ದೇವೆ. ನಮ್ಮ ದೇಶದಲ್ಲಿ ಕೆಲಸ ಮಾಡುವವರಿಗೆ ಉದ್ಯೋಗವನ್ನು ಒದಗಿಸಿಕೊಡುವುದು ಅಗತ್ಯವೆನ್ನುವ ದೃಷ್ಟಿಯಲ್ಲಿಟ್ಟು ಕೊಂಡು ಈ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಆದರೆ ನಿರುದ್ಯೋಗಿಗಳಿಗೆ ನಿರುದ್ಯೋಗಿ ಭತ್ಯ ವನ್ನು ಕೊಡುವ ಬಗ್ಗೆ ಸಧ್ಯಕ್ಕೆ ನಮ್ಮ ರಾಜ್ಯ ಸರ್ಕಾರದಲ್ಲಿ ಯೋಜನೆ ಇಲ್ಲ.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ, ಉದ್ಯೋಗ ವಿನಿಮಯ ಕಛೇರಿಯ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ, ಆದರೆ ಅಲ್ಲಿ ಲಂಚ ರುಷುವತ್ತು ಏನು ನಡೆಯುತ್ತಿದೆ ಅದನ್ನು ಹೋಗಲಾಡಿಸುವುದಕ್ಕೆ ಏನಾದರೂ ಪ್ರಯತ್ನ ಕೈಗೊಂಡಿದ್ದೀರಾ ? ಮತ್ತು ಒಂದು ಸಾರಿ ನೋಂದಾಯಿಸಿದವರಿಗೆ ಇಂಟರ್‌ವ್ಯೂ ಆದರೂ ಸಿಗುವಂತೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಕೆಲವು ಜನರುಗಳು ಹೆಸರನ್ನು ನೋಂದಾಯಿಸಿದ್ದರೂ ಇಂಟರ್‌ವ್ಯೂಗೇ ಬರುವುದಿಲ್ಲ ಕೆಲವರ ಹೆಸರುಗಳು ಮಾತ್ರ ಬರುತ್ತದೆ, ಈ ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದರ ಬಗ್ಗೆ ನಮ್ಮ ಗಮನಕ್ಕೆ ಸಾರ್ವ ಜನಿಕರು ತಂದದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟು ನೋಟೀಸ್ ಬೋರ್ಡಿನಲ್ಲೂ ಹಾಕಿದ್ದೇವೆ. ಇಂಥಾದ್ದು ಏನಾದರೂ ನಡೆದಲ್ಲಿ ಮಾನ್ಯ ಸದಸ್ಯರುಗಳು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ ಕೂಡಲೇ ಅಂಥವರ ವಿರುದ್ಧ ಕ್ರಮ ತಗೆದುಕೊಳ್ಳುತ್ತೇವೆ. ಮತ್ತೆ ಬೆಂಗಳೂರು ನಗರದಲ್ಲಿಯೇ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸರ್ ಮತ್ತು ಸ್ಟಾಫ್‌ಗಳು ವರ್ಷಾನುಗಟ್ಟಲೆಯಿಂದ ಏನು ಇದ್ದಾರೆ ಅಂಥವರನ್ನು ೩ ವರ್ಷಕ್ಕೊಂದು ಸಾರಿ ವರ್ಗಾವಣೆ ಮಾಡ ಬೇಕೆಂದು ಮಾಡಿದ್ದೇವೆ ಅವರೆಲ್ಲಾ ಈ ತಿಂಗಳೋ ಮುಂದಿನ ತಿಂಗಳೋ ವರ್ಗವಾಗಿ ಹೋಗುತ್ತಿದ್ದಾರೆ. ಹೀಗೆ ಮಾಡಿದಾಗ್ಯೂ ಸಹ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ ಅದನ್ನು ತಿಳಿಸಿದರೆ ಅಂಥವರ ವಿರುದ್ಧ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನ ತಕ್ಕ ಆಶ್ವಾಸನೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ. ರಾಮ್‌ದೇವ್.—ಯುವಕರ ಬಗ್ಗೆ ನೌಕರಿಗೆ ಸೇರಲು ಏನು ಒಂದು ವಯಸ್ಸಿನ ಮಿತಿ ಯನ್ನು ಸರ್ಕಾರ ನಿಗದಿಮಾಡಿದೆ ಆ ವಯಸ್ಸಿನಲ್ಲಿ ಅವರು ನೌಕರಿ ದೊರಕಿಸಿಕೊಳ್ಳಲು ಕಷ್ಟವಾಗಿದೆ. ಕಾರಣ ೧೦-೬ ವರ್ಷಗಳು ಅವರ ಹೆಸರುಗಳನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನೋಂದಾಯಿಸಿದರೂ ಕೆಲಸ ದೊರೆಯದೆ ರಸ್ತೆ ರಸ್ತೆಗಳಲ್ಲಿ ಅಲೆಯುತ್ತಿದ್ದಾರೆ. ಆದ್ದರಿಂದ ಅವರ ವಯಸ್ಸಿನ ಮಿತಿ ಏನು ೩೦ ವರ್ಷಗಳು ಇದೆ ಅದನ್ನು ಇನ್ನು ಹೆಚ್ಚು ಮಾಡುತ್ತೀರಾ ? ಅವರಿಗೆ ೩೦ ವರ್ಷಗಳು ಕಳೆದರೂ ಅವರಿಗೆ ಇಂಟರ್‌ವ್ಯೂ ಕಳುಹಿಸುತ್ತಾ ಇಲ್ಲ ಆದ್ದರಿಂದ ಇನ್ನು ಒಂದೆರಡು ವರ್ಷಗಳು ಹೆಚ್ಚು ಮಾಡುವು ದಕ್ಕೆ ಸಾಧ್ಯವೇ ?

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸದಸ್ಯರು ಇನ್ನು ಮದುವೆಯಾಗದ ಬ್ರಹ್ಮಚಾರಿಗಳು ಅವರಿಗೆ ಇವತ್ತಿನ ದಿವಸ ದೇಶದಲ್ಲಿ ಯಾವರೀತಿ ನಮ್ಮ ರಾಜ್ಯದಲ್ಲಿ ಪದವೀಧರರು ಕಾರ್ಖಾನೆಗಳಿಂದ ಉತ್ಪತ್ತಿ ಯಾದ ಪದಾರ್ಥದ ರೀತಿಯಲ್ಲಿ ಹೊರಗೆ ಬರುತ್ತಿದ್ದಾರೆ ಇನ್ನು ವಯಸ್ಸಿನ ಮಿತಿ ಹೆಚ್ಚು ಮಾಡಿದರೆ ಇನ್ನು ನಿರುದ್ಯೋಗದ ಸಮಸ್ಯೆ ಜಾಸ್ತಿಯಾಗುತ್ತದೆ. ಆದ್ದರಿಂದ ಎಂಪ್ಲಾಯ್‌ಮೆಂಟ್ ಆಪರ್‌ಚ್ಯುನಿಟಿ ಜಾಸ್ತಿಮಾಡಿ ನಾವು ಎಲ್ಲರೂ ಸೇರಿ ಇದನ್ನು ನಿವಾರಿಸುವುದಕ್ಕೆ ಪ್ರಯತ್ನಪಡೋಣ.

Delay in starting the First Generator in Kaliproject, Hydel

280. SRI M. C. BASAPPA (Chamarajanagar).—Will the Chief Minister be pleased to state.—

(a) whether the work at Kali Project is in Progress as Scheduled;

(b) whether there was any delay in starting the first Generator ;

(c) reasons for the delay?